ಅಸಲು ದಾವೆ ಸಂಖ್ಯೆ- 131/2014
ಡಿಡಬ್ಲ್ಯೂ- 01
ದಿನಾಂಕಃ 28.09.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದ

ನಾನು ಶಾಲೆ ಕಲಿತಿಲ್ಲ. ತಕರಾರು ಬರೆಯಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ . ದಾವಾ ಆಸ್ತಿ ನಂ.91 ಇರುತ್ತದೆ. ಸದರಿ ಆಸ್ತಿ ನಮ್ಮ ದೊಡ್ಡಪ್ಪನ ಹೆಸರಿನಲ್ಲಿತ್ತು. ಆತನ ಹೆಸರು ಬಾಬುಸಾಬ. ನನ್ನ ತಂದೆ ಹೆಸರು ಅಬ್ದುಲಗಣಿ. ನನ್ನ ತಂದೆ ದಿನಾಂಕಃ 13.03.1985 ರಂದು ನಮ್ಮ ಆಸ್ತಿ ಬಿನಶೇತ್ಕಿ ಪ್ಲಾಟ ನಂ.104 ನ್ನು ಯಲ್ಲಪ್ಪ ಹನಮಂತಪ್ಪ ಭೋವಿ ಇತನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗೆಯ ಪಶ್ಚಿಮಕ್ಕೆ ಜಾಗ ಉಳಿಸಿಕೊಂಡಿದ್ದೆವು ಎಂದರೆ ಹಿತ್ತಲ ಇರುತ್ತದೆ. ಅದರಲ್ಲಿ ಮೊದಲು ಒಂದು ಚಪ್ಪರ ಹಾಕಿದ್ದೆವು ಎಂದರೆ ಸರಿಯಲ್ಲ. ಪೂರ್ವಕ್ಕೆ ಮನೆ ಇತ್ತು, ಪಶ್ಚಿಮಕ್ಕೆ ಹಿತ್ತಲ ಇತ್ತು. ಇದನ್ನು ಹೊರತುಪಡಿಸಿ ನನ್ನ ತಂದೆ ತನ್ನ ಪಾಲಿಗೆ ಬಂದ ಆಸ್ತಿಯನ್ನು ಬಾಸು ಬಾಷರಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಭೋವಿ ಮತ್ತು ಬಾಷರಿ ಇವರಿಗೆ ಮಾರಿದ ಆಸ್ತಿಗಳು ನನ್ನ ತಂದೆ ಹಿಸ್ಸೆಗೆ ಬಂದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆ ಹಿಸ್ಸೆ ಮಾಡಿಕೊಂಡಿಲ್ಲ ಅಂತಾ ನುಡಿಯುತ್ತಾರೆ. ನನ್ನ ತಂದೆ ತನ್ನ ಪಾಲಿಗೆ ಬಂದ ಹಿಸ್ಸೆ ಮಾರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲದೇ ಇರುವುದರಿಂದ ನನಗೆ ಯಾವುದೇ ಆಸ್ತಿ ಬಂದಿಲ್ಲ ಎಂದರೆ ನನ್ನ ದೊಡ್ಡಪ್ಪನ ಹೆಸರಿನಲ್ಲಿರುತ್ತದೆ. ನನ್ನ ದೊಡ್ಡಪ್ಪ ತನ್ನ ಆಸ್ತಿಯನ್ನು ಅಬ್ದುಲಖಾದರ ಕಾರಡಗಿಗೆ ಕೊಟ್ಟು ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆ ಪ್ರಕಾರ ಅಬ್ದುಲಖಾದರ ಕಾರಡಗಿ ಹೆಸರು ಉತಾರೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ನಂತರ ಅಬ್ದುಲಖಾದರ ನೊಂದಾಯಿತ ದಾನ ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸರಿ. ನಂತರ ನಾವು ಅಸಲು ದಾವೆ ನಂ.42/2014 ನ್ನು ದಾಖಲಿಸಿದ್ದೆವು ಎಂದರೆ ಸರಿ. ಮಹಮ್ಮದಸಾಬ ಬಾಬುಸಾಬ ಲಟ್ಟಿವಾಲೆ ಇತ ಖಾಯಂ ತರೀಖ ಯಲವಿಗಿಯಲ್ಲಿರುತ್ತಿದ್ದ ಎಂದರೆ ಸರಿ. ಆತ 8-10 ವರ್ಷ ಹಾಸಿಗೆ ಹಿಡಿದಿದ್ದ ಎಂದರೆ ನನಗೆ ಗೊತ್ತಿಲ್ಲ. ಆತ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿ. ಅದರಂತೆ ಅಬ್ದುಲಗಫರಸಾಬ ಬಾಬುಸಾಬ ಲಟ್ಟಿವಾಲೆ ಇತ ಖಾಯಂ ತರೀಖವಾಗಿ ಮೀರಜದಲ್ಲಿ ಇರುತ್ತಾನೆ ಎಂದರೆ ಸರಿ.

ಸದರಿ ಅಬ್ದುಲಗಫರಸಾಬ ಶಾಲೆ ಕಲಿತಿರುತ್ತಾನೆ ಎನ್ನುವುದು ನನಗೆ ಗೊತ್ತಿಲ್ಲ. ಆತ ಶಾಲೆ ಕಲಿತಿದ್ದರೂ ಸಹ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕುರಿತು ಅಸಲು ದಾವೆ ನಂ.42/2014 ರಲ್ಲಿ ರಾಜೀ ಡಿಕ್ರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಅಸಲು ದಾವೆ ನಂ.42/2014 ರಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿದ್ದೆ. ಅಬ್ದುಲಗಫರಸಾಬ ಮತ್ತು ಮಹಮ್ಮದಸಾಬ ಪರವಾಗಿ ಯಾರು ಹಾಜರಾಗಿದ್ದರು ಎಂದರೆ ಅವರೇ ಹಾಜರಾಗಿದ್ದರು. ಅವರ ಪರವಾಗಿ ಬೇರೆಯವರನ್ನು ತಂದು ಕೋರ್ಟನಲ್ಲಿ ನಿಲ್ಲಿಸಿ ಡಿಕ್ರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಬ್ದುಲಗಫರಸಾಬ ಇತ ಇಂಗ್ಲೀಷನಲ್ಲಿ ಅಬ್ದುಲಗಫರಸಾಬ ಬಾಬುಸಾಬ ಲಟ್ಟೆವಾಲೆ ಅಂತಾ ಬರೆದು ಸಹಿ ಮಾಡುತ್ತಾನೆ ಎನ್ನುವುದು ಸರಿ. ಆತನ ಸಹಿ ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ಅಸಲು ದಾವೆ ನಂ.42/2014 ರಲ್ಲಿ ಮಾಡಿದ ಸಹಿ ನೋಡಿದರೆ ಈಗ ಗುರುತಿಸಲು ಆಗುವುದಿಲ್ಲ. ಮಹಮ್ಮದಸಾಬ ಹಾಸಿಗೆ ಹಿಡಿದಿದ್ದ ಮತ್ತು ಅಬ್ದುಲಗಫರಸಾಬ ಮೀರಜದಲ್ಲಿ ಇದ್ದ, ಆದರೂ ಸಹ ಅವರ ಬರದಿದ್ದರೂ ಅವರ ಸಹಿ ಬೇರೆಯವರ ಕಡೆ ಮಾಡಿಸಿ ಡಿಕ್ರಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಖೊಟ್ಟಿ ಸಹಿ ಮಾಡಿದ್ದಕ್ಕಾಗಿ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸು ಇರುತ್ತದೆ ಎಂದರೆ ಇರುತ್ತದೆ . ಸದರಿ ಪ್ರಕರಣದಲ್ಲಿ ನಾನು ಹಾಜರಾಗಿರುತ್ತೇನೆ ಎಂದರೆ ಸರಿ. ಬಾಬುಸಾಬ ಯಾವಾಗ ತೀರಿಕೊಂಡಿರುತ್ತಾನೆ ದಿನಾಂಕ ಹೇಳಲು ಬರುವುದಿಲ್ಲ. ಜಿಲಾನಿ ನನ್ನ ತಮ್ಮನ ಮಗ. ಆತನ ವಯಸ್ಸು 24-25 ಇರಬಹುದು. ಬಾಬುಸಾಬ ಇತ್ತೀಚೆಗೆ ತೀರಿಕೊಂಡಿರುತ್ತಾನೆ, ನಾವು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆದ ಆಸ್ತಿಯನ್ನು ಅಬ್ದುಲಖಾದರ ಕಾರಡಗಿಗೆ ಕೊಟ್ಟು ನಂತರ ತೀರಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 59 ವರ್ಷದ ಹಿಂದೆ ತೀರಿಕೊಂಡಿರುತ್ತಾನೆ, ವಾದಿ 2010 ರಲ್ಲಿ ದಾಖಲೆ ಮಾಡಿಕೊಂಡಿರುತ್ತಾನೆ ಅಂತಾ ನುಡಿಯುತ್ತಾರೆ. ಆತ ತೀರಿಕೊಂಡಿರುವ ಕುರಿತು ದಾಖಲೆ ಮಾಡಿಸಿಲ್ಲ. ದಾವಾ ಆಸ್ತಿಗೆ ನಾವು ಬೆಂಕಿ ಹಚ್ಚಿದ್ದೆವು ಅಂತಾ ನಮ್ಮ ಮೇಲೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ, ಬೆಂಕಿ ನಾವು ಹಚ್ಚಿಲ್ಲ. ಈ ಪೊಟೋಗಳು ಸದರಿ ಬೆಂಕಿ ಹಚ್ಚಿದ ದಾವಾ ಆಸ್ತಿಯ ಪೋಟೋಗಳು ಇರಬಹುದು ಎಂದರೆ ಅವರೇ ಅಂದರೆ ವಾದಿಯರು ಹಚ್ಚಿದ್ದರು. ಸದರಿ ಪೋಟೋಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ಈ ಕುರಿತು ನಮ್ಮ ಮೇಲೆ ಕ್ರಿಮಿನಲ್ ಕೇಸು ದಾಖಲಾಗಿತ್ತು ಎಂದರೆ ಸರಿ. ಜಿಲಾನಿ ಕಡೆಯಿಂದ ಅರ್ಜಿ ದಾಖಲಿಸಿಕೊಂಡು ಬಾಬುಸಾಬ ತೀರಿಕೊಂಡ ಕುರಿತು ಎಂಟ್ರಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಬ್ದುಲಗಫರಸಾಬ ಮೀರಜದಲ್ಲಿ ಕೆಲಸ ಮಾಡುತ್ತಾನೆ ಎನ್ನುವುದು ನನಗೆ ಗೊತ್ತಿಲ್ಲ. ಆತ

ತಿಂಗಳಿಗೊಮ್ಮೆ ನಮ್ಮ ಮನೆಗೆ ಬರುತ್ತಾನೆ ಎಂದರೆ ಸರಿಯಲ್ಲ. ಅಬ್ದುಲಗಫರಸಾಬ ನಮ್ಮ ಜೊತೆ ದಾವಾ ಆಸ್ತಿ ಕುರಿತು ರಾಜೀ ಮಾಡಿಕೊಂಡಿಲ್ಲ ಎಂದರೆ ಸರಿ. ದಾವಾ ಆಸ್ತಿ ನಮಗಾಗಲೀ, ಅಬ್ದುಲಗಫರಸಾಬ ಲಟ್ಟೆವಾಲೆಗಾಗಲೀ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಬಾಬುಸಾಬನ ಸ್ವಂತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಬಾಬುಸಾಬನ ಹಿಸ್ಸೆಗೆ ಬಂದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಹಿಸ್ಸೆ ಮಾಡಿಕೊಂಡಿಲ್ಲ, ಆದ್ದರಿಂದ ದಾಖಲೆ ಇಲ್ಲ. ಅಬ್ದುಲಖಾದರ ಇತನ ಹೆಸರು ದಾಖಲಾಗುವ ಮೊದಲು ಬಾಬುಸಾಬನ ಹೆಸರಿನಲ್ಲಿ ಮಾತ್ರ ದಾವಾ ಆಸ್ತಿ ಇತ್ತು ಎಂದರೆ ಸರಿ . ಆತ ಕೊಟ್ಟ ನಂತರ ಅಬ್ದುಲಖಾದರನ ಹೆಸರು ಬಂದಿರುತ್ತದೆ ಎಂದರೆ ಸರಿ. ಇವತ್ತಿಗೂ ದಾವಾ ಆಸ್ತಿ ವಾದಿ ಹೆಸರಿನಲ್ಲಿರುತ್ತದೆ ಎಂದರೆ ಸರಿ. ವಾದಿಯ ಕಬ್ಜಗೆ ನಾವು ತೊಂದರೆ ಕೊಟ್ಟಿದ್ದಕ್ಕಾಗಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ದಾವೆ ಹೂಡಿದ ನಂತರ ನಾವು ಖಾತೆ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಎ.ಸಿ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ ನಂತರ ಮತ್ತೆ ವಾದಿ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಆ ಪ್ರಕಾರ ವಾದಿ ದಾವಾದ ಆಸ್ತಿಯನ್ನು ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ. ಸಾಕ್ಷಿ ಮುಂದುವರೆದು ವಹಿವಾಟು ಎಂದರೆ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ, ಆಗ ವಾದಿ ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ, ನಾವು ಕಬ್ಜೆಯಲ್ಲಿರುತ್ತೇವೆ. ದಾವಾ ಆಸ್ತಿಗೆ ವಾದಿಯರಿಗೆ ಮಾತ್ರ ಹಕ್ಕಿರುತ್ತದೆ, ನಮಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ನಮ್ಮ ಹಕ್ಕು ಇರುತ್ತದೆ ಅಂತಾ ತೋರಿಸಲು ದಾಖಲೆ ಇರುವುದಿಲ್ಲ. ನಮ್ಮವು 4-5 ಮನೆತನ ಇರುತ್ತವೆ ಎಂದರೆ ಸರಿ. ವಾದಿ ಹೆಣ್ಣು ಮಗಳು ಇರುವುದರಿಂದ ಅವಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಹೊಡಿಬಡಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯ ಎತ್ತಿಹಾಕಬೇಕು ಅಂತಾ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಕಬ್ಜೆಯಲ್ಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.